**SUMMATIVE ASSEMENT - 2**

**SECOND TERM (OCTOBER 2012 –MARCH-2013**

**STANDARD X – KANNADA QUESTION BANK**

**ಕನ್ನಡ ಕೋಡ್ ಸಂಖ್ಯೆ –೦೧೫**

**ಸಿ.ಬಿ.ಎಸ್.ಸಿ – ಕನ್ನಡ ಪ್ರಶ್ನೆಕೋಶ**

---

**ವಿಭಾಗ –ಎ (ವಾಚನ ಮತ್ತು ಗ್ರಹಿಕಾ ಕೌಶಲ) : ೧೨ ಅಂಕಗಳು**

I. ಈ ಕೆಳಗಿನ ಗದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:

ದಯಾನಂದ ಸರಸ್ವತಿ ೧೮೨೪ರಲ್ಲಿ ಕಾಠೇವಾಡದಲ್ಲಿ ಜನಿಸಿದರು. ಅವರ ಮೊದಲ ಹೆಸರು ಮೂಲಶಂಕರ. ಬಾಲ್ಯದಲ್ಲಿ ಸಂಸ್ಕೃತವನ್ನು ಕಲಿತರು. ಅನಂತರ ಉತ್ತರಭಾರತ, ಹಿಮಾಲಯ ಪ್ರದೇಶಗಳಲ್ಲಿ ಸುತ್ತಾಡಿ ವೈದಿಕ ಹಾಗೂ ಸಂಸ್ಕೃತದ ಉನ್ನತಾಭ್ಯಾಸ ಮಾಡಿದರು. ಮಥುರಾದಲ್ಲಿ ಸಿಕ್ಕಿದ ಕುರುಡ ಸನ್ಯಾಸಿ ಸ್ವಾಮಿ ವಿರಜಾನಂದರು ಅವರಿಗೆ ವೇದಗಳನ್ನು ಕುರಿತು ಪಾಠ ಹೇಳಿ ಅದರ ಬಗೆಗೆ ಅಪಾರ ಗೌರವವುಂಟು ಮಾಡಿದರು. ಮೂಲಶಂಕರ ಸನ್ಯಾಸವನ್ನು ಸ್ವೀಕರಿಸಿ ದಯಾನಂದ ಸರಸ್ವತಿ ಎಂಬ ದೀಕ್ಷಾನಾಮ ವಹಿಸಿದರು.

ಬಾಲ್ಯವಿವಾಹ, ಅಸ್ಪೃಶ್ಯತೆ, ಜಾತಿಪದ್ಧತಿ, ಮೂರ್ತಿಪೂಜೆಗಳನ್ನು ವೇದಗಳು ಪುರಸ್ಕರಿಸುವುದಿಲ್ಲ ಎಂಬುದನ್ನು ತಮ್ಮ ಆಳವಾದ ಅಭ್ಯಾಸದಿಂದ ತಿಳಿದ ದಯಾನಂದರು ಅದರ ವಿರುದ್ಧ ಅತ್ಯಂತ ತೀವ್ರವಾಗಿ ಹೋರಾಟ ನಡೆಸಿದರು. ಭಾರತಾದ್ಯಂತ ಸಂಚರಿಸಿ ಉಪನ್ಯಾಸಗಳನ್ನು ಮಾಡಿದರು. ವಾದಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ಮಂಡನೆ ಮಾಡಿ ತಮ್ಮ ಅಪ್ರತಿಮ ತರ್ಕದಿಂದ ತಮ್ಮ ನಿಲುವನ್ನು ಸಮರ್ಥಿಸಿಕೊಂಡರು. ವೇದಗಳ ಆಧಾರವಿಲ್ಲದ ಆಚರಣೆಗಳ ಬಗೆಗೆ ಅವರಿಗೆ ತಿರಸ್ಕಾರವಿತ್ತು. ವೇದಗಳಲ್ಲಿ ಅವರಿಗೆ ಅಪಾರ ಭಕ್ತಿ ಗೌರವವಿತ್ತು. ಆದ್ದರಿಂದ ಅವರು ವೇದಗಳಿಗೆ ಹೊಸ ಅರ್ಥಕೊಡುವ ಪ್ರಯತ್ನ ನಡೆಸಿದರು. ಸತ್ಯಾರ್ಥ ಪ್ರಕಾಶ ಎಂಬ ಗ್ರಂಥವನ್ನು ಬರೆದರು. ೧೮೭೫ರ ಏಪ್ರಿಲ್ ೧೦ ರಂದು ಮುಂಬಯಿಯಲ್ಲಿ ಆರ್ಯಸಮಾಜ ಸ್ಥಾಪಿಸಿ ತಮ್ಮ ಆದರ್ಶಗಳನ್ನು ಕಾರ್ಯರೂಪಕ್ಕೆ ತರಲು ದಯಾನಂದರು ಶ್ರಮಿಸಿದರು.

**ಪ್ರಶ್ನೆಗಳು:** (VSAQ)

1. ದಯಾನಂದ ಸರಸ್ವತಿ ಎಲ್ಲಿ ಜನಿಸಿದರು? ೦೧
2. ದಯಾನಂದ ಸರಸ್ವತಿ ಸ್ಥಾಪಿಸಿದ ಸಂಸ್ಥೆ ಯಾವುದು? ೦೧

(SAQ)

3. ದಯಾನಂದ ಸರಸ್ವತಿ ವೇದಗಳ ಬಗ್ಗೆ ಅಪಾರ ಗೌರವವನ್ನು ಹೇಗೆ ಪಡೆದರು? ೦೨
4. ದಯಾನಂದ ಸರಸ್ವತಿ ಯಾವುದರ ವಿರುದ್ಧ ಹೋರಾಟ ನಡೆಸಿದರು? ೦೨

**II. ಈ ಕೆಳಗಿನ ಪದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:**

"ಬೀಸಣಿಗೆ ಬೇಕೇ ಸ್ವಾಮಿ ಬೀಸಣಿಗೆ
ಹತ್ತು ಪೈಸಕ್ಕೊಂದು ಹೊಸಾ ಬೀಸಣಿಗೆ"
ಬಂತಪ್ಪ ಬಂತು, ಬಂದೇ ಬಿಡ್ತು
ಈ ಊರೊಳಗೆ ಬೇಸಿಗೆ.

ಶರಬತ್ತಿನಂಗಡಿಯ ಖಾಲಿ ಕುರ್ಚಿಯ ಮೇಲೆ
ಛಳಿಗಾಲ ತೂರಿದ್ದ ತರಗು–ಧೂಳನು ಒರಸಿ
ಬಣ್ಣ ಬಣ್ಣದ ಸೀಸೆಗಳನ್ನು ಸಾಲಾಗಿರಿಸಿ
ಹಳೆಯ ಚಿಲ್ಲರೆ ಎಣಿಸಿ ಕೂತಿದ್ದಾನೆ ಮಾಲೀಕ
ಬೀಡಾ ಜಗಿಯುತ್ತ
ಎದುರಿಗೇ ಇದೆ ಸೋಡಾ ಸೀಸೆ ಹೊಗೆಯಾಡುತ್ತ.

ಕಿತ್ತಳೆಯ ಹಣ್ಣು ಮುದಿಮುಖವಾಗಿ, ಮೋಸುಂಬೆ
ನೀರಸವಾಗಿ ಮೂಲೆಯಲಿ ಕೂತಿರಲು
ಬೇಲದ ಹಣ್ಣು ಬುಟ್ಟಿಯ ತುಂಬ; ಸಿದ್ದೋಟಿ
ಕರಬೂಜ ಕಲ್ಲಂಗಡಿಗಳದ್ದೇ ರಾಜ್ಯಭಾರ,
ಹೂವಿನಂಗಡಿಯ ಸಾಲುಗಳಲ್ಲಿ ಮೈಸೂರ ಮಲ್ಲಿಗೆ
ಮಾರ್ಕೆಟ್ಟಿನೀ ಸದ್ದು ಗದ್ದಲದಲ್ಲು ಘಮಘಮ ಮೆಲ್ಲಗೆ.

ಬಿರುಬಿಸಿಲಲ್ಲೇ ಮಿರಿಮಿರೀ ಕರೀ ರಸ್ತೆ
ಸುಟ್ಟವಾಸನೆ ಹೊಡೆದು
ಉಜ್ಜಿ ನಡೆಯುವ ರಬ್ಬರಿನ ಗಾಲಿ ಧೂಳಿನ ಜೊತೆಗೆ
ಪೆಟ್ರೋಲು ವಾಸನೆ ಬೆರೆದು ವಿಲಕ್ಷಣ ಪಾಕ–
ಕೆಳಗೆಲ್ಲ ಹಾಳು ಸುರಿಯುವ ಹಗಲು, ಮೇಲೆ
ಬರಿ ತರಲೆ ಆಕಾಶ, ಮಳೆ ಬರುವುದೇ ಇಲ್ಲ.

**ಪ್ರಶ್ನೆಗಳು:** (VSAQ)

4. ಬೀಸಣಿಗೆಯನ್ನು ಯಾವ ಕಾಲದಲ್ಲಿ ಮಾರುತ್ತಿದ್ದರು? ೦೧
5. ಷರಬತ್ತಿನಂಗಡಿಯ ಮಾಲೀಕ ಏನು ಮಾಡುತ್ತಿದ್ದಾನೆ? ೦೧

(SAQ)

6. ಮಾರುಕಟ್ಟೆಯಲ್ಲಿ ಯಾವ ಯಾವ ಹೂ ಹಣ್ಣುಗಳಿದ್ದವು? ೦೨
7. ಬಿರುಬಿಸಲಿನಿಂದ ಮಾರುಕಟ್ಟೆ ಹೇಗಾಗಿತ್ತು? ೦೨

**III. ಈ ಕೆಳಗಿನ ಪದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ:**

ನಮ್ಮ ಮನೆಯ ಮುಂದಿದ್ದೆರಡು ಕಲ್ಪವೃಕ್ಷಗಳು
ನಮ್ಮನೆಗೆ ಶೋಭೆಯಾಗಿತ್ತು;
ಯುದ್ಧ ಮುಗಿಸಿ ಬಂದ ನನ್ನಣ್ಣ ಹೇಳಿದ
ತೆಂಗಿನಮರಗಳು ನಮ್ಮನೆಗೆ ರಕ್ಷಣೆ ನೀಡುವ
ವೀರ ದ್ವಾರಪಾಲಕರೆಂದು

ಮಲೆನಾಡ ಸೀಮೆಯಿಂದ ಬಂದ
ಆಯುರ್ವೇದದ ವೈದ್ಯರು
ಗೊನೆಗಳಿಂದ ತುಂಬಿದ ತೆಂಗಿನ ಮರಗಳನ್ನು ಕಂಡು
ಅದರ ಔಷಧೀಯ ಗುಣಗಳನ್ನು ತಿಳಿಸಿ,
ತಂಪಾದ ಎಳನೀರು ಕುಡಿದು, ವಿಶ್ರಮಿಸಿಕೊಂಡರು.

ನಮ್ಮನೆಯ ಕೆಲಸದಾಕೆ ನಮ್ಮನೆಯ
ತೆಂಗಿನ ಮರವನ್ನು ಇಷ್ಟಪಡುತ್ತಿದ್ದಳು,
ಬೀಳುವ ಗರಿಯ ಕಡ್ಡಿಗಳಿಂದ ಪೊರಕೆ ಮಾಡಿ,
ಉಳಿದ ಗರಿಯಲ್ಲಿ ಸುಂದರ ಚಾಪೆ ಮಾಡಿದಳು

ಒಣಗಿದ ತೆಂಗಿನ ಮಟ್ಟೆಯನ್ನು ನೀರಲ್ಲಿ ನೆನಸಿ
ನಾರು ತೆಗೆದು ಹಗ್ಗ ಮಾಡಿದ ನಮ್ಮಜ್ಜ,
ಇದನ್ನು ಕಂಡ ನನ್ನ ಕಣ್ಣು ಇಂದಿಗೂ
ನೆನೆಯುವುದು ನಮ್ಮಜ್ಜ ನೆಟ್ಟ ತೆಂಗಿನಮರವ.

ಪ್ರಶ್ನೆಗಳು: (VSAQ)

8. ತೆಂಗಿನಮರಗಳು ಎಲ್ಲಿದ್ದವು? ೦೧
9. ಆರ್ಯುರ್ವೇದದ ವೈದ್ಯರು ಏನು ಮಾಡಿದರು? ೦೧

(SAQ)

10. ಮನೆಯ ಕೆಲಸದಾಕೆಗೆ ತೆಂಗಿನಮರವೆಂದರೆ ಏಕೆ ಬಲು ಪ್ರೀತಿ? ೦೨
11. ಒಣಗಿದ ಮಟ್ಟೆಯಿಂದ ಅಜ್ಜ ಏನು ಮಾಡುತ್ತಿದ್ದರು? ೦೨

**ವಿಭಾಗ–ಬಿ (ಬರವಣಿಗೆ ಕೌಶಲ): ೧೪ ಅಂಕಗಳು**

**IV.** (LAQ) **ಪ್ರಬಂಧ (೬ಅಂಕಗಳು)**

12.ಜನಪದ ಸಾಹಿತ್ಯದ ಮಹತ್ವ
13. ಗ್ರಾಮೀಣ ಜೀವನ
14. ಜೀವಜಲ ರಕ್ಷಣೆ ನಮ್ಮೆಲ್ಲರ ಹೊಣೆ
15. ಹಬ್ಬಗಳ ಮಹತ್ವ
16. ವಿದ್ಯಾರ್ಥಿಗಳಲ್ಲಿ ಶಿಸ್ತು
17. ಹೆಚ್ಚುತ್ತಿರುವ ವೃದ್ಧಾಶ್ರಮಗಳು

**v. ಪತ್ರ ಲೇಖನ (೪ ಅಂಕಗಳು)**(LAQ)

18. ದಿನಾಂಕ ೧೧.೧೦.೨೦೧೨ ರ ವಿಜಯವಾಣಿ ದಿನ ಪತ್ರಿಕೆಯಲ್ಲಿ ಪ್ರಕಟವಾದ ಮೇರೆಗೆ ಸರ್ವಜ್ಞ ಕಾಲೇಜು, ರಾಜಾಜಿನಗರ, ಬೆಂಗಳೂರು. ಇಲ್ಲಿಗೆ ಕನ್ನಡ ಉಪನ್ಯಾಸಕರ ಹುದ್ದೆಗೆ ತಮ್ಮ ಸ್ವವಿವರದೊಂದಿಗೆ ಅರ್ಜಿ ಸಲ್ಲಿಸಿ.
19. ನಿಮ್ಮ ಬಡಾವಣೆಯಲ್ಲಿ ಕುಡಿಯುವ ನೀರಿನ ಅಭಾವವನ್ನು ನಿವಾರಿಸುವಂತೆ ಕೋರಿ ನಿಮ್ಮ ವಿಭಾಗದ ಜಲಮಂಡಲಿ ಆಯುಕ್ತರಿಗೆ ಅರ್ಜಿ ಸಲ್ಲಿಸಿ.

**VI ವರದಿ (೪ ಅಂಕಗಳು) .** (LAQ)

20. ನಿಮ್ಮ ವಸತಿ ನಿಲಯದಲ್ಲಿ ವಿದ್ಯಾರ್ಥಿಗಳಿಗಾಗುತ್ತಿರುವ ಅನಾನುಕೂಲಗಳನ್ನು ಕುರಿತು ಒಂದು ವರದಿಯನ್ನು ಸಿದ್ಧಪಡಿಸಿರಿ.

21. ಕರ್ನಾಟಕದಲ್ಲಿ ವನ್ಯಜೀವಿಗಳು ಕಡಿಮೆಯಾಗುತ್ತಿರುವ ಆತಂಕಕಾರಿ ಸಂಗತಿಯನ್ನು ಕುರಿತು ಒಂದು ವರದಿಯನ್ನು ಸಿದ್ಧಪಡಿಸಿರಿ.
22. ದೇಶಭಕ್ತ ಪ್ರತಿಮೆಯ ಅನಾವರಣ ಸಮಾರಂಭದ ವರದಿಯನ್ನು ಸಿದ್ಧಪಡಿಸಿ.

## ವಿಭಾಗ-ಸಿ (ವ್ಯಾಕರಣ) : ೧೪ ಅಂಕಗಳು

**VII.** (VSAQ) (ಅರ್ಧ ಮತ್ತು ಒಂದು ಅಂಕಗಳು)

23. ನಾನಾರ್ಥಗಳು: ಕವಿ, ಅರಸು, ಕರೆ, ಹರಿ, ದೊರೆ, ಮುನಿ.
24. ಸಮಾಸಗಳು: ಅರಮನೆ, ಕಂಬನಿ, ದೈವವಿಲಾಸ, ಹೆಜ್ಜೇನು, ಹೆಬ್ಬಂಡೆ, ಒಗ್ಗಟ್ಟು , ಇಕ್ಕೆಲ, ಮುಮ್ಮಡಿ, ಪಂಚೇಂದ್ರಿಯ, ಮುಕ್ಕಣ್ಣು.
25. ಸಂಧಿಗಳು: ಅತ್ಯಂತ, ಚತುರೋಕ್ತಿ, ಒಮ್ಮೊಮ್ಮೆ, ಕಳೆಗುಂದು, ಲೋಕೈಕ, ವಾಗ್ದೇವಿ, ಷಣ್ಮುಖ ವಾಗೀಶ, ಸದ್ಭಾವನ
26. ನುಡಿಗಟ್ಟು/ಪದಗಳನ್ನು ಸ್ವಂತ ವಾಕ್ಯದಲ್ಲಿ ರಚಿಸಿ: ಪ್ರಗತಿ ಪಥ, ಪರಿಷ್ಕರಿಸು, ಮಾರಣಹೋಮ, ಕಣ್ಣಲ್ಲಿ ಕಣ್ಣಿಡು, ಹೊಟ್ಟೆಬಟ್ಟೆಕಟ್ಟು, ಕಾಲಿಗೆ ಬುದ್ಧಿಹೇಳು.
27. ತತ್ಸಮ-ತದ್ಭವ : ರತ್ನ, ಆರ್ಯ, ಕಾವ್ಯ, ಅಗ್ನಿ, ಜನ್ಮ, ಚಂದ್ರ, ಐಶ್ವರ್ಯ, ಕಸ್ತೂರಿ, ಧಾತ್ರಿ, ವರ್ಣ.
28. ಸಮಾನಾರ್ಥಕ ಪದ : ಸರದಾರ, ಮುಕುಟ, ಬೂಟಾಟಿಕೆ, ನಿರತ, ಸಾಮಜ, ವದನ, ಧೃತಿ, ಅಲಗು ಪತಾಕೆ, ವಸುಧಾ.
29. ವಿರುದ್ಧಾರ್ಥಕ ಪದ : ಉತ್ತೀರ್ಣ, ಸಜ್ಜನ, ವಂಚನೆ, ಸ್ವಾತಂತ್ರ್ಯ, ದೇವ, ಅದೃಷ್ಟ.
30. ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೇ ಪದಕ್ಕೆ ಸಂಬಂಧ ಕಲ್ಪಿಸಿ.
    ಹೋಗುತ್ತಾನೆ : ಹೋಗು ; ; ಎದ್ದನು:------
    ಹಿರಿದು ; ಗುಣವಾಚಕ ; ; ಎರಡು ---------
    ಪೂರ್ವ ; ದಿಗ್ವಾಚಕ ; ; ಅವರು ---------
    ಕ್ಷಣ ಕ್ಷಣ ; ದ್ವಿರುಕ್ತಿ ; ಝಣ ಝಣ -------

ಗಾದೆ ಮಾತನ್ನು ವಿವರಿಸಿ(SAQ) (ಎರಡು ಅಂಕಗಳು)

31. ಮಿಂಚಿಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲ
32. ಎಂಜಲು ಕೈಯಲ್ಲೂ ಕಾಗೆ ಓಡಿಸದವ
33. ದೇಶಸುತ್ತ ಕೋಶ ಓದು
34. ವಿದ್ಯೆ ಒಕ್ಕಾಲು, ಬುದ್ಧಿ ಮುಕ್ಕಾಲು

## ವಿಭಾಗ-ಡಿ ( ಪಠ್ಯಗಳ ಅಧ್ಯಯನ) : ೫೦ ಅಂಕಗಳು

**VIII. ಬಹು ಆಯ್ಕೆ ಪ್ರಶ್ನೆಗಳು (೧೪ ಅಂಕಗಳು)** (VSAQ)

35. ಇಂಗ್ಲೀಷ್ ಶಬ್ದಗಳು------- ಉಡುಪನ್ನು ಧರಿಸಿ ಒಳಗೆ ಬಂದಿದೆ.
    ಅ) ಪ್ರಾಕೃತ ಬ) ಸಂಸ್ಕೃತ ಕ) ಕನ್ನಡ ಡ) ತಮಿಳು
36. ಅಂಗುಲೀಮಾಲನು ---------- ಬೇಸರವಾಯಿತು ಎಂದನು.
    ಅ) ಹೊಸ ಬ) ಹಳೆಯ ಕ) ಎಲುಬಿನ ಕಿರೀಟ ಡ) ಮಾಲೆ

37. ಎಣ್ಣೆ ತುಪ್ಪದ ಮಿಶ್ರಣ ಬೇಡವೆಂದವರು

ಅ) ನಯಸೇನ ಬ) ಪಂಪ ಕ) ರನ್ನ ಡ) ಮರಿಯಪ್ಪ ಭಟ್ಟ

38. ಅಂಗುಲೀಮಾಲ ಬುದ್ಧನನ್ನು ಕರೆದದ್ದು ಹೀಗೆ

ಅ) ತಂತ್ರ ವಿದ್ಯೆಯನ್ನರಿತವ ಬ) ಮಂತ್ರ ವಿದ್ಯೆಯನ್ನರಿತವ ಕ) ಪ್ರೇಮ ಮಂತ್ರ ಜಪಿಸುವವ ಡ) ಒಲುಮೆ ಸಾಧಕ

39. ವೆಂಕಣ್ಣ ಮೇಷ್ಟ್ರಿಗೆ ಹೆಚ್ಚು ಸಂಕಟವಾಗಲು ಕಾರಣ:

ಅ) ಗ್ರಾಮಸ್ಥರ ಬಹಿಷ್ಕಾರ ಬ) ಹೆಂಡತಿಯ ಸಾವು ಕ) ಅಧಿಕಾರಿ ವಿಧಿಸಿದ ಜುಲ್ಮಾನೆ ಡ) ಮಕ್ಕಳು ಅನಾಥರಾಗಿದ್ದರಿಂದ

40. ಪುಲಿಗೆರೆ ಸೋಮನಾಥರ ಅಂಕಿತನಾಮ--------

ಅ) ಸೋಮೇಶ್ವರ ಬ) ಪುಲಿಗೆರೆ ಕ) ಹರಾ ಹರಾ ಶ್ರೀ ಚೆನ್ನಸೋಮೇಶ್ವರ ಡ) ಸೋಮನಾಥ

41. ಮಂಜಪ್ಪನವರ ಕಾಲದಲ್ಲಿ ವಿದ್ಯಾರ್ಥಿಗಳ ಗುರಿ ಇದಾಗಿತ್ತು.

ಅ) ಉತ್ತೀರ್ಣರಾಗುವುದು ಬ) ಜ್ಞಾನ ಸಂಪಾದಿಸುವುದು

ಕ) ವಿದ್ಯಾರ್ಥಿ ವೇತನ ಪಡೆಯುವುದು ಡ) ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವುದು

42. 'ಸಾವಂಗೆ ಸಮುದ್ರಂ ಮೊಳಕಾಲುದ್ದಂ' ಎಂದು ನಿರ್ಧರಿಸಿ ಬರುತ್ತಿದ್ದವರು:

ಅ) ಬಾಯಾಳು ಬ) ಗ್ರಾಮಸಿಂಹ ಕ) ದೀರ್ಘಕರ್ಣ ಡ) ಸಿಂಹ

43. ದುಡಿಯುವಾಗ, ನೋವುಪಡುವಾಗ ಹೇಗಿರಬೇಕು?

ಅ) ತುಟಿ ಬಿಗಿಯಬೇಕು ಬ) ತುಟಿ ಬಿಚ್ಚಬೇಕು ಕ) ತುಟಿ ತೆಗೆಯಬೇಕು ಡ) ಮೆಲ್ಲನೆ ನುಡಿಯಬೇಕು

44. ಸೂರ್ಯಪ್ರಭೆಗೆ ಸಮಾನವಾದುದು

ಅ) ಸತ್ಯ ಬ) ಮಿಥ್ಯ ಕ) ಅಸತ್ಯ ಡ) ಗಗನ

45. ದುರ್ಯೋಧನನು ಸರೋವರದಿಂದ ಹೊರಬಂದ ರೀತಿ:

ಅ) ಕಾಲಾಗ್ನಿ ರುದ್ರನು ಭೂಮಿಯಿಂದ ಹೊರಬರುವ ರೀತಿ

ಬ) ಆನೆ ನೀರಿನಿಂದ ಹೊರ ಬರುವ ರೀತಿ

ಕ) ಅಗ್ನಿಯು ಸರೋವರದಿಂದ ಹೊರಬರುವ ರೀತಿ

ಡ) ಸಿಂಹವು ಕಾಡಿನಿಂದ ಹೊರಬರುವ ರೀತಿ

46. 'ಅರಂಕುಶವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ' ಎಂದು ಹೇಳಿದ ಕವಿ:

ಅ) ರನ್ನ ಬ) ಪಂಪ ಕ) ಕುಮಾರವ್ಯಾಸ ಡ) ಜನ್ನ

47. ಕನ್ನಡವು ಸುಲಿದ ಬಾಳೆಯ ಹಣ್ಣಿನಂತೆ ಎಂದವರು:

ಅ) ನಯಸೇನ ಬ) ಮಹಲಿಂಗ ರಂಗ ಕ) ಬಸವಣ್ಣ ಡ) ಮರಿಯಪ್ಪ ಭಟ್ಟ

48. ಬುದ್ಧ ಇವನನ್ನು ಅರಸುತ್ತಾ ಬಂದ

ಅ) ಬಲಿದಾಸ ಬ) ಏಕಾಕ್ಷ ಕ) ಅಂಗುಲೀಮಾಲ ಡ) ಪ್ರಭುಶಂಕರ

49. ರಂಗಣ್ಣ ಶಾಲೆಯ ಭೇಟಿಗೆಂದು ಇಲ್ಲಿಗೆ ಬಂದದ್ದು–

ಅ) ತಿಪ್ಪೇನಹಳ್ಳಿ ಬ) ತಿಪ್ಪಗೊಂಡನಹಳ್ಳಿ ಕ) ತೀರ್ಥಹಳ್ಳಿ ಡ) ಮಾದಪ್ಪನ ಹಳ್ಳಿ

50. 'ಇಲಿಯಡ್' ಮತ್ತು 'ಒಡಿಸ್ಸಿ' ಎಂಬ ಮಹಾಕಾವ್ಯಗಳನ್ನು ರಚಿಸಿದವರು

ಅ) ಟಾಲ್‌ಸ್ಟಾಯ್ ಬ) ರೂಸೋ ಕ) ಹೋಮರ್ ಡ) ವಾಲ್ಟೇರ್

51. ಸಿಂಹಕ್ಕೆ ಮಾರಿಬರ್ಪಂತೆ ಬಂದುದು

ಅ) ಮೊಲ ಬ) ಆನೆ ಕ) ಜಿಂಕೆ ಡ) ನರಿ

52. ವದನದಲ್ಲಿ-----------ಇರಬೇಕು.

ಅ) ಸ್ಮಿತ ಬ) ಕೋಪ ಕ)ಋತ ಡ) ಹಿತ

53. ಜಲನಿಧಿಗೆ ಸಮಾನವಾದ ಸರಸಿ---------

ಅ) ಸೂರ್ಯ ಬ) ಚಂದ್ರ ಕ) ಭೂಮಿ ಡ) ಆಕಾಶ

54. ಈ ಹಾದಿಯಲ್ಲಿ ಕಲ್ಲಿಲ್ಲ, ಮುಳ್ಳಿಲ್ಲ :

ಅ) ಶಾಲೆಯ ಬ) ಕಾಡಿನ ಕ) ತವರೂರ ಡ) ದೇವಸ್ಥಾನದ

55. ಉರಗಪತಾಕೆಯನ್ನು ತನ್ನ ರಥದಲ್ಲಿ ಹೊಂದಿದವನು.

ಅ) ಅರ್ಜುನ ಬ) ದುರ್ಯೋಧನ ಕ) ಭೀಮ ಡ) ಕೃಷ್ಣ

56. ಮರಿದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ಎಂದವರು

ಅ) ನೃಪತುಂಗ ಬ)ಪಂಪ ಕ) ರನ್ನ ಡ) ಲಕ್ಷ್ಮೀಧರಾಮಾತ್ಮ

57. ಕೆರೆಯಂ ಕಟ್ಟಿಸು, ಬಾವಿಯಂ ಸವೆಸು ಎಂದವರು.

ಅ) ಪಂಪನ ತಾಯಿ ಬ) ನೃಪತುಂಗನ ತಾಯಿ

ಕ) ಲಕ್ಷ್ಮೀಧರಾಮಾತ್ಮನ ತಾಯಿ ಡ) ಅಮಾತ್ಯರಾಕ್ಷಸನ ತಾಯಿ

58. ಇವನು ಸಿಂಹಕೇತನ

ಅ) ಅರ್ಜುನ ಬ) ಭೀಮ ಕ) ಭೀಷ್ಮ ಡ) ದ್ರೋಣ

59. ಲೋಕದಲ್ಲಿ ನಿಜವಾದ ಮಡಿ ಇದು.

ಅ) ಸದಾಚಾರ ಬ)ಶುದ್ಧವಾದ ಸ್ನಾನ ಕ) ನಿರ್ಮಲ ಚಿತ್ತ ಡ) ಸದ್ಗತಿ

**IX. ಎರಡು –ಮೂರು ವಾಕ್ಯಗಳಲ್ಲಿ ಉತ್ತರಿಸಿರಿ. (ಎರಡು ಅಂಕಗಳ ಪ್ರಶ್ನೆಗಳು)** (SAQ)

60. ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆಯ ಲಕ್ಷಣಗಳೇನು?
61. ಬುದ್ಧನ ಅಪ್ಪುಗೆಯ ಸುಖವನ್ನು ಅನುಭವಿಸಿದ ಅಂಗುಲೀಮಾಲ ತನ್ನಲ್ಲೇ ಹೇಳಿಕೊಂಡಿದ್ದೇನು?
62. ರಂಗಣ್ಣನ ಮುಖ ಜೋಲು ಬೀಳಲು ಕಾರಣವೇನು?
63. ಕಾಲೇಜಿಗೆ ಬಿಡುವಿದ್ದಾಗ ಮಂಜಪ್ಪ ಅವರು ಅಧ್ಯಯನ ಮಾಡುತ್ತಿದ್ದ ಪ್ರಮುಖ ಗ್ರಂಥಗಳಾವುವು?
64. ಕವಿ ಆಹಾರದ ನಿರೀಕ್ಷೆಯಲ್ಲಿದ್ದ ಸಿಂಹವನ್ನು ಹೇಗೆ ವರ್ಣಿಸಿದ್ದಾನೆ?
65. ನಿರ್ಮಲ ಚಿತ್ತವನ್ನು ಗಳಿಸುವುದು ಹೇಗೆ?
66. ನಕುಲಾದಿ ಭೀಮರಿಗೆ ದುರ್ಗತಿ ಒದಗಿದ ಪ್ರಸಂಗವನ್ನು ವಿವರಿಸಿ.
67. ಕಪ್ಪೆಅರಭಟ್ಟನ ಶಾಸನದ ಪ್ರಕಾರ ಕನ್ನಡಿಗರು ಎಂಥವರು?
68. ಲಿಪಿಯ ಮೂಲಕ ಜ್ಞಾನಭಂಡಾರ ಯಾವ ರೀತಿ ಭದ್ರವಾಯಿತು?

**X. ಐದು– ಆರು ವಾಕ್ಯಗಳಲ್ಲಿ ಉತ್ತರಿಸಿ : (ಮೂರು ಅಂಕಗಳ ಪ್ರಶ್ನೆಗಳು)** (LAQ)

69. ಆಂಗ್ಲಭಾಷೆ ವಿಶ್ವವ್ಯಾಪಿಯಾಗಲು ಕಾರಣವೇನು
70. ಮನದ ಉದ್ವೇಗದ ನಿಯಂತ್ರಣಕ್ಕೆ ಏನೇನು ಮಾಡಬೇಕು?
71. ನಕುಲಾದಿ ಭೀಮರಿಗೆ ದುರ್ಗತಿ ಒದಗಿದ ಪ್ರಸಂಗವನ್ನು ವಿವರಿಸಿ.
72. ದುರ್ಯೋಧನ ನೀರೊಳಗಿದ್ದೂ ಬೆವರಲು ಕಾರಣವೇನು?
73. ವಿಧಾನಸೌಧದ ಆರಂಭೋತ್ಸವ ಎಂದು ಜರುಗಿತು?
74. ಕವಿ ಬನವಾಸಿ ದೇಶವನ್ನು ನೆನೆಯಲು ಕಾರಣವಾದ ಅಂಶಗಳು ಯಾವುವು?
75. ಶಾಸನಗಳಲ್ಲಿ ಕನ್ನಡ ಸಂಸ್ಕೃತಿ ಹೇಗೆ ವ್ಯಕ್ತವಾಗಿದೆ?
76. ಸಿಂಹ ಆಹಾರಕ್ಕಾಗಿ ಏನೇನು ಮಾಡಿತು?

## XI ಸಂದರ್ಭದೊಡನೆ ವಿವರಿಸಿ: (ಮೂರು ಅಥವಾ ನಾಲ್ಕು ಅಂಕಗಳ ಪ್ರಶ್ನೆಗಳು) (LAQ)

77. "ತಕ್ಕುದೆ ಬೆರೆಸಲ್ಕೆ ಘೃತಮುಮಂ ತೈಲಮುಮಂ"
78. "ನಿಂತೆ ಇರುವೆನು ನಾನು ನೀನಿನ್ನೂ ನಿಂತಿಲ್ಲ"
79. "ಹೆಂಡತಿ ಸತ್ತಾಗ ಇಷ್ಟು ಸಂಕಟ ಆಗಲಿಲ್ಲ"
80. "ಪಲವುಂ ಪಳ್ಳ ಸಮುದ್ರಮೈ"
81. "ಕಣ್ಣೋಟ ಶಿವನ ಕೈಯಲಗು ಹೊಳೆದಂಗೆ"

## XII ಎಂಟು- ಹತ್ತು ವಾಕ್ಯಗಳಲ್ಲಿ ಉತ್ತರಿಸಿ: (ಐದು ಅಂಕಗಳ ಪ್ರಶ್ನೆಗಳು) (LAQ)

82. ಪ್ರಾಣಿಗಳು ಬಂದು ಸಿಂಹದ ಬಳಿ ಏನೆಂದು ಪ್ರಾರ್ಥಿಸಿದವು?
83. ಕವಿ ನೃಪತುಂಗ ಕನ್ನಡಿಗರ ಜಾಣ್ಮೆಯನ್ನು ಹೇಗೆ ಕೊಂಡಾಡಿದ್ದಾನೆ?
84. ಕಡಿದಾಳ ಮಂಜಪ್ಪನವರ ಅಭ್ಯಾಸ ಕ್ರಮವನ್ನು ವಿವರಿಸಿ.
85. ದುರ್ಯೋಧನನು ವೈಶಂಪಾಯನ ಸರೋವರದಿಂದ ಹೊರಬಂದ ರೀತಿಯನ್ನು ವಿವರಿಸಿ.
86. ಹೆಡ್‌ಮೇಷ್ಟ್ರು ವೆಂಕಟಸುಬ್ಬಯ್ಯ ಮಾಡಿದ ಸಹಾಯವನ್ನು ವಿವರಿಸಿ.
87. ಹೆಣ್ಣಿಗೆ ತವರಿನ ಬಗೆಗಿರುವ ಅಭಿಮಾನ ಎಂಥದ್ದು? ವಿವರಿಸಿ
88. ಅಂಗುಲೀಮಾಲನ ಮನಸ್ಸು ಪರಿವರ್ತನೆಗೊಂಡ ಬಗೆ ಹೇಗೆ?
89. ಪಾಂಡವರು ಸರೋವರದ ಬಳಿ ಬರಲು ಕಾರಣವಾದ ಪ್ರಸಂಗವನ್ನು ವಿವರಿಸಿ.
90. ನಗುವಿನ ಮಹತ್ವವನ್ನು ಕವಿಯ ಮಾತುಗಳಲ್ಲಿ ಪರಿಚಯ ಮಾಡಿಕೊಡಿ.
91. ಕನ್ನಡ ಭಾಷೆ ಸಮೃದ್ಧವಾಗಿ ರೂಪುಗೊಂಡ ಬಗೆ ಹೇಗೆ?

****************